02 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 594/2021**

| | |
|---|---|
| ಹೆಸರುಃ  ಸಂತೋಷ | ಚಾಸಾಃ 1 |
| ತಂದೆಯ  ಹೆಸರುಃ  ಮಲ್ಲೇಶಪ್ಪ | ಪ್ರಾಸಾ: 3 |
| ವಯಸ್ಸುಃ   33  ವರ್ಷ | |
| ಉದ್ಯೋಗಃ ವ್ಯವಸಾಯ | |
| ವಾಸ ಸ್ಥಳಃ ಸಂತೆಬೆನ್ನೂರು,  ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ 21-10-2023 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ಮತ್ತು 2 ನನ್ನ ತಾಯಿ ತಂದೆ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಾನು ದಿಃ15-11-2020 ರಂದು ಕಳುವಾದ ವಿಚಾರವಾಗಿ ದೂರಿನಲ್ಲಿ ಮಾಡಿರುತ್ತೇನೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಮ್ಮ ಮನೆಯಲ್ಲಿ  ಬೆಳಗಿನ ಜಾವ 3.00 ರಿಂದ 4.00  ಗಂಟೆ ಸಮಯದಲ್ಲಿ ನಾವು ಮನೆಯಲ್ಲಿ ಮಲಗಿದ್ದು ಬೆಳಿಗ್ಗೆ ಎಂದು ನೋಡಿದಾಗ ಬೀರುವಿನಲ್ಲಿಟ್ಟಿದ್ದ ಬಟ್ಟೆ ಬರೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು. ಅದರಲ್ಲಿದ್ದ ಒಂದು ಜೊತೆ ಬೆಂಡೋಲೆ, ಒಂದು ಜೊತೆ ಸಣ್ಣ ಕಿವಿಯೋಲೆ, (ಒಟ್ಟು 2 ವರೆ ತೊಲ ಬಂಗಾರ), 15 ಸಾವಿರ ನಗದು ಹಣ  ಕಳುವಾಗಿರುತ್ತದೆ.  ಸುಮಾರು 5 ಸಾವಿರ ಬೆಲೆ ಬಾಳುವ ಒಂದು ಮೊಬೈಲ್ ಕಳುವಾಗಿರುತ್ತದೆ. ಸದರಿ ಒಡವೆಗಳು ಸುಮಾರು 28 ರಿಂದ 30 ಸಾವಿರ  ಬೆಲೆ ಬಾಳುತ್ತದೆ.

ನಾನು ನೀಡಿದ ನಿಪಿ-1 ರ ಮಾರನೇ ದಿನ ಪೊಲೀಸರು  ಬಂದು ನಮ್ಮ ಮನೆಗೆ ಬಂದು ಬೀರುವನ್ನು ಪರಿಶೀಲಿಸಿ ನಾನು ತೋರಿಸಿದ ಸ್ಥಳದಲ್ಲಿ ಮಹಜರನ್ನು ಸುಮಾರು 11.00 ರಿಂದ 11.30 ವರೆಗೆ ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ಪೊಲೀಸರ ಜೊತೆ ಇಬ್ಬರು ಸ್ಥಳೀಯರು ಹಾಜರಿದ್ದು ಅವರ ಹೆಸರು ಮತ್ತು ವಿಳಾಸ ಹೇಳಲಾಗುವುದಿಲ್ಲ.

ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಸದರಿ ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇದ್ದೇನೆ. ಸದರಿ ಫೋಟೋವನ್ನು ನಮ್ಮ ಮನೆಯಲ್ಲಿ ನಿಪಿ-2 ರ ಸಮಯದಲ್ಲಿ ತೆಗೆಯಲಾಯಿತು. ಸದರಿ ಫೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು.

ನಮ್ಮ ಮನೆಯಲ್ಲಿ ಕಳುವಾದ ವಸ್ತುಗಳು 2 ತಿಂಗಳ ಒಳಗೆ ಸಿಕ್ಕಿರುತ್ತದೆ. ಸರಿದ ಆಭರಣಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ನಮ್ಮ ಮಧ್ಯಂತರ ವಶಕ್ಕೆ ಪಡೆದಿದ್ದು ಸಾಕ್ಷಿ ಈಗ ತನ್ನೊಂದಿಗೆ ತಂದಿರುವ ಬಂಗಾರದ ಆಭರಣಗಳನ್ನು ಫೋಟೋದಲ್ಲಿ ನೋಡಿ ಗುರುತಿಸಿದ್ದು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ನಿಪಿ-1 ನ್ನು ದಾಖಲಿಸಿದ 2 ತಿಂಗಳ ನಂತರ ಒಡವೆಗಳನ್ನು ಮತ್ತು ಮೊಬೈಲ್ ನ್ನು ನಮ್ಮ ವಶಕ್ಕೆ ಪೊಲೀಸಿನವರು ಕೊಟ್ಟಿರುತ್ತಾರೆ. ಸದರಿ ದಾಖಲೆ ಮಾಲು ಬಿಡುಗಡೆ ಪಂಚನಾಮೆಯಾಗಿದ್ದು ಸದರಿ ಪಂಚನಾಮೆಯನ್ನು ನಿಪಿ-4 ಮತ್ತು 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ರ ಸಮಯದಲ್ಲಿ ಇಬ್ಬರು ಹಾಜರಿದ್ದು ಅವರ ಹೆಸರು ಮತ್ತು ವಿಳಾಸ ಹೇಳಲಾಗುವುದಿಲ್ಲ.

ಈಗ ನೋಡುತ್ತಿರುವ ಫೋಟೋದಲ್ಲಿ ನಾನು ಇದ್ದೇನೆ. ಸದರಿ ಫೋಟೋವನ್ನು ನಿಪಿ-4 ಮತ್ತು 5 ರ ಸಮಯದಲ್ಲಿ ತೆಗೆಯಲಾಗಿರುತ್ತದೆ. ಸದರಿ ಫೋಟೋಗಳನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ನಮ್ಮ ಮನೆಯಲ್ಲಿ ಕಳುವಾದ ನಗದು ಹಣ ಸಿಕ್ಕಿರುವುದಿಲ್ಲ. ಕಳುವಾದ ನಗದು ಹಣ 15 ಸಾವಿರಗಳನ್ನು ಕಳ್ಳತನ ಮಾಡಿದ ವ್ಯಕ್ತಿಗಳು ಖರ್ಚು ಮಾಡಿರುತ್ತಾರೆ ಎಂದು ಪೊಲೀಸರು ತಿಳಿಸಿರುತ್ತಾರೆ. ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಗಳ ಹೆಸರು ಚಾಂದ್ ಪೀರ್ ಮತ್ತು ರೋಶನ್ ಎಂದು ಪೊಲೀಸರು ಕರೆದುಕೊಂಡು ಬಂದಾಗ ತಿಳಿಸಿರುತ್ತಾರೆ.

ಸದರಿ ಒಂದು ಜೊತೆ ಬೆಂಡೋಲೆ ಮತ್ತು ಒಂದು ಜೊತೆ ಕಿವಿಯೋಲೆ ಮತ್ತು ಒಂದು ಮೆಬೈಲ್ ಫೋನ್ ಗಳನ್ನು ಮು.ಮಾ-1 ರಿಂದ 3 ಎಂದು ಗುರುತಿಸಿ, ಅವುಗಳನ್ನು ಚಾಸಾ-1 ರವರ ಅಭಿರಕ್ಷೆಗೆ ನೀಡಲಾಗಿರುತ್ತದೆ.

ಸದರಿ ವಿಚಾರದಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ನಾನು ಪೊಲೀಸರು ಸದರಿ ದಿನ ಕರೆತಂದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಅತನಹೆಸರು ರೋಶನ್. ಸದರಿ ಆರೋಪಿ ತಲೆಮರೆಸಿಕೊಂಡಿರುವುದರಿಂದ ಆತನನ್ನು ಈ ಪ್ರಕರಣದಿಂದ ಪ್ರತ್ಯೇಕಗೊಳಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯು ದೂರು ಮತ್ತು ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು ಮತ್ತು ಮಹಜರನ್ನುನೋಡಲಾಗಿ ಸಾಕ್ಷಿಯು ದೂರು ಮತ್ತು ಮಹಜರಿಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ದಿಃ 15-11-2020 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ನಾವು ಮಲಗಿದ್ದಾಗ 16-11-2020 ರ ಬೆಳಗಿನ ಜಾವ 5.50 ರ ಸಮಯಕ್ಕೆ ನಮ್ಮ ಮನೆಯ ಮುಂಬಾಗಿಲು ತೆರೆದಿದ್ದು ಬೀರುವಿನ ಬಾಗಿಲು ಸಹ ತೆರೆದಿರುತ್ತದೆ. ಬೀರುವಿನಲ್ಲಿದ್ದ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದು ಕಂಡುಬಂದಿರುತ್ತದೆ. ಹಾಗಾಗಿ ನಾನು ಸದರಿ ದಿನ ಕಳ್ಳತನದ ವಿಚಾರವಾರಗಿ ನಿಪಿ-1 ನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಕಳುವಾದ ವಸ್ತುಗಳ ಮೌಲ್ಯ 60 ಸಾವಿರ ಎಂದು ನಮೂದಿಸಿರುತ್ತೇನೆ ಎಂದರೆ ಸರಿ.

ದಿಃ 16-11-2020 ರಂದು ಪೊಲೀಸರು ನಿಪಿ-2 ನ್ನು ಜರುಗಿಸಲು ಚಾಸಾ-4 ಮತ್ತು 5 ರವರು ಕರೆದುಕೊಂಡು ಬಂದಿದ್ದರು ಎಂದರೆ ಇರಬಹುದು. ನಿಪಿ-3 ನ್ನು ನಿಪಿ-2 ರ ಸಮಯದಲ್ಲಿ ತೆಗೆದಿರುತ್ತಾರೆ ಎಂದರೆ ಸರಿ. ನಿಪಿ-3 ರಲ್ಲಿ ನಾನು, ಚಾಸಾ-4 ಮತ್ತು 5 ಮತ್ತು ಪೊಲೀಸಿನವರು ಇದ್ದಾರೆ ಎಂದರೆ ಸರಿ.

ದಿಃ02-11-2021 ಮತ್ತು 11-02-2021 ರಂದು ಪೊಲೀಸರು ನಿಪಿ-4 ಮತ್ತು 5 ರಂತೆ ಮಾಲು ಬಿಡುಗಡೆ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ನಿಪಿ-4 ಮತ್ತು 5 ರಂತೆ ಮು,ಮಾ-1 ರಿಂದ 3 ನ್ನು ನನ್ನವಶಕ್ಕೆ ಪಡೆದಿರುತ್ತೇನೆ.

ನಂತರ ನಾನು ನನ್ನ ಹೇಳಿಕೆಯಲ್ಲಿ 1 ನೇ ಆರೋಪಿ ನಮ್ಮ ಮ ನೆಯಲ್ಲಿ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದು ನಂತರ ಮರು ಹೇಳಿಕೆಯಲ್ಲಿ ಚಾಂದ್‌ಪೀರ್ ಎಂಬುವವನು ಕಳ್ಳತನ ಮಾಡಿರುವುದಾಗಿ ಮರು ಹೇಳಿಕೆ ಕೊಟ್ಟಿದ್ದು ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು – ಆರೋಪಿತರ ಪರ ಶ್ರೀ ಎಸ್ ವಿ ಎನ್ ವಕೀಲರಿಂದ –**

ನಿಪಿ-1 ರಲ್ಲಿ ಬರೆದ ಸಂಪೂರ್ಣ ವಿಚಾರ ನನಗೆ ಗೊತ್ತಿದೆ. ಕಳ್ಳತನವಾದ ದಿನ ನಾವು ಬಾಗಿಲನ್ನು ಹಾಕಿ ಮಲಗಿರುತ್ತೆವೆ ಎಂದರೆ ಸರಿ. ಬಾಗಿಲು ತೆಗೆದಾಗ ಶಬ್ಬ ಕೇಳಿದರೆ ಎಚ್ಚರವಾಗುತ್ತದೆ ಎಂದರೆ ಸಾಕ್ಷಿ ನಮಗೆ ಎಚ್ಚರವಾಗಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ಸದರಿ ದಿನ ನಮ್ಮ ಮನೆಯಲ್ಲಿ ಯಾವುದೇ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಕಳ್ಳತನವನ್ನು ಯಾರು ಮಾಡಿದರು ಎಂದು ನನಗೆ ಗೊತ್ತಿಲ್ಲ, ಪೊಲೀಸರು ಮಾಹಿತಿ ನೀಡಿರುತ್ತಾರೆ.

ನಿಪಿ-1 ನ್ನು ನಾನು ಬರೆದಿದ್ದು, ನಿಪಿ-2 ನ್ನು ಪೊಲೀಸರು ಬರೆದಿರುತ್ತಾರೆ ಅದರಲ್ಲಿ ಬರೆದ ವಿಚಾರ ನನಗೆ ಗೊತ್ತು. ನಾನು ನೀಡಿದ ನಿಪಿ-1 ರಲ್ಲಿನ ವಿಚಾರವಾಗಿ ನಿಪಿ-2 ನ್ನು ಬರೆದಿರುತ್ತಾರೆ. ನಿಪಿ-2 ನ್ನು ಪೊಲೀಸಿನವರು ಬರೆದರು ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-2 ರ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ನಮ್ಮ ಮನೆಯಲ್ಲಿ ಬರೆದಿರುತ್ತಾರೆ. ನಿಪಿ-3 ನ್ನು ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ.

ನಾನು 2 ನೇ ಆರೋಪಿಯನ್ನು ಇದೇ ದಿನ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೆನೆ ಎಂದರೆ ಸಾಕ್ಷಿ ಪೊಲೀಸರು ನಮ್ಮ ಮನೆಗೆ ಕರೆದುಕೊಂಡು ಬಂದಾಗ ನೋಡಿರುತ್ತೇನೆ

ಎಂದುನುಡಿಯುತ್ತಾರೆ. ಪೊಲೀಸರು ನಮ್ಮಮನೆಗೆ ಆರೋಪಿಯನ್ನುಕರೆದುಕೊಂಡು ಬಂದ ದಿನಾಂಕ ನನಗೆ ನೆನಪಿಲ್ಲ. ನಮ್ಮ ಮನೆಯಲ್ಲಿ ಯಾವುದೇ ಎರಡೂವರೆ ತೊಲ ಬಂಗಾರ ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ-5 ರಲ್ಲಿ ಉಲ್ಲೇಖವಿರುಂವತೆ ನಮ್ಮ ಮನೆಯಲ್ಲಿಕಳುವಾದ ಬಂಗಾರದ ವಸ್ತುಗಳು 4 ಗ್ರಾ ಅಷ್ಟು ಆಗಿತ್ತು ಎಂದರೆ ಸರಿಯಲ್ಲ. ಕಳುವಾದ 15 ಸಾವಿರ ನಗದು ಹಣದ ಮುಖ ಬೆಲೆ ಮತ್ತು ಕ್ರಮ ಸಂಖೆ ನನಗೆ ಹೇಳಲಾಗುವುದಿಲ್ಲ.

ನಮ್ಮ ಮನೆಯಲ್ಲಿ ಆರೋಪಿ ಯಾವುದೇ ಕಳ್ಳತನ ಮಾಡದೇ ಇದ್ದರು ಸಹ ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಚಾಸಾ-4 ಮತುತ 5 ರವರು ಯಾವುದೇ ಮಹಜರಿಗೆ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ, ಈ ಪ್ರಕರಣಕ್ಕೂ ಆರೋಪಿತರಿಗೂ ಮತ್ತು ಮು.ಮಾ-1 ರಿಂದ 3 ಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

02 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 594/2021**

| | |
|---|---|
| ಹೆಸರುಃ  ಮಲ್ಲೇಶಪ್ಪ | ಚಾಸಾಃ 2 |
| ತಂದೆಯ  ಹೆಸರುಃ  ಹಾಲಪ್ಪ | ಪ್ರಾಸಾ: 2 |
| ವಯಸ್ಸುಃ  65    ವರ್ಷ | |
| ಉದ್ಯೋಗಃ   ವ್ಯವಸಾಯ | |
| ವಾಸ ಸ್ಥಳಃ ಸಂತೆಬೆನ್ನೂರು,  ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ 21-10-2023 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಮಗ, ಚಾಸಾ-3 ನನ್ನ ಹೆಂಡತಿ,

ಕಳೆದ ಸುಮಾರು ಎರಡೂವರೆ ವರ್ಷದ ಹಿಂದೆ  ನಮ್ಮ ಮನೆಯಲ್ಲಿ  ಬೆಳಗಿನ ಜಾವ 3.00 ಗಂಟೆ ಸಮಯದಲ್ಲಿ ನಾವು ಮನೆಯಲ್ಲಿ ಮಲಗಿರುವಾಗ ಬೀರುವಿನಲ್ಲಿಟ್ಟಿದ್ದ ಒಂದು ಜೊತೆ ಬೆಂಡೋಲೆ, ಒಂದು ಜೊತೆ ಸಣ್ಣ ಕಿವಿಯೋಲೆ, (ಒಟ್ಟು 2 ವರೆ ತೊಲ ಬಂಗಾರ), 15 ಸಾವಿರ ನಗದು ಹಣ  ಕಳುವಾಗಿರುತ್ತದೆ.  ಸುಮಾರು 5 ಸಾವಿರ ಬೆಲೆ ಬಾಳುವ ಒಂದು ಮೊಬೈಲ್ ಕಸುವಾಗಿರುತ್ತದೆ. ಸದರಿ ಒಡವೆಗಳು ಎಷ್ಟು ಬೆಲೆ ಬಾಳುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ.

ಸದರಿ ವಿಚಾರವಾಗಿ ಚಾಸಾ-1 ರವರು ದೂರನ್ನು ದಾಖಲಿಸಿದ್ದು.  ದೂರನ್ನು ನೀಡಿದ ದಿನದಂದೇ  ಪೊಲೀಸರು ಒಬ್ಬ ವ್ಯಕ್ತಿಯನ್ನು ನಮ್ಮ ಮನೆ ಬಳಿ ಕರೆತಂದು ಸದರಿ ವ್ಯಕ್ತಿ ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ತೋರಿಸಿರುತ್ತಾರೆ. ನಮ್ಮ ಮನೆಯಲ್ಲಿ ಕಳುವಾದ ಆಭರಣಗಳನ್ನು ಚಾಸಾ-1 ರವರು ಪಡೆದಿರುತ್ತಾರೆ.  ನಗದು ಹಣವನ್ನು ಕೊಟ್ಟಿರುವುದಿಲ್ಲ.  ಸದರಿ ಕಳ್ಳತನ ಮಾಡಿದ ಯಾರು ಎಂದು ನನಗೆ ಕಣ್ಣು ಮಬ್ಬಾಗಿರುವುದರಿಂದ ಗುರುತಿಸಲು ಆಗುವುದಿಲ್ಲ. ಸದರಿ ವಿಚಾರವನ್ನು ಪೊಲೀಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ  ಮತ್ತು ಮರು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು,   ಹೇಳಿಕೆಯನ್ನು  ಮತ್ತು ಮರು ಹೇಳಿಕೆಯನ್ನು ಭಾಗಶಃ ನೋಡಲಾಗಿ ಸಾಕ್ಷಿಯು ಹೇಳಿಕೆಗೆ  ಮತ್ತು ಮರು ಹೇಳಿಕೆಗೆ  ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು  ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 15-11-2020 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಕಳ್ಳತನವಾಗಿದೆ ಎಂದರೆ ಸರಿ. ನನಗೆ ನಮ್ಮ ಮನೆಯಲ್ಲಿ ಕಳುವಾದ ಸಂಗತಿ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದು ಕಂಡುಬಂದಿದ್ದನ್ನು ಪರಿಶೀಲಿಸಿ ನೋಡಿದಾಗ ಅದೇ ದಿನ ಬೆಳಗಿನ ಜಾವ 5.00 ಗಂಟೆಗೆ ತಿಳಿದುಬಂದಿರುತ್ತದೆ. ಕಳ್ಳತನವಾದ ಆಭರಣಗಳು ಒಂದು ಜೊತೆ ಬೆಂಡೋಲೆ ಎರಡುಮುಕ್ಕಾಲು ಗ್ರಾಂ, ಕಿವಿಯೋಲೆ ಎರಡೂಮುಕ್ಕಾಲು ಗ್ರಾಂ ಇತ್ತು ಎಂದರೆ ಸರಿ. ಸದರಿ ದಿನ ಚಾಸಾ-1 ರವರ ಮೊಬೈಲ್ ಸಹ ಕಳುವಾಗಿರುತ್ತದೆ. ಸದರಿ ಮೊಬೈಲ್ ಬೆಲೆ ಸುಮಾರು 5,000/- ರೂ. ಗಳು ಎಂದರೆ ಸರಿ. ಸರಿದ ಕಳುವಾದ ಆಭರಣಗಳ ಮೌಲ್ಯ 22 ಸಾವಿರ ರೂ ಆಗಿತ್ತು ಎಂದರೆ ಸರಿ.

ಸದರಿ ದಿನ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಗಳ ಹೆಸರು ಚಾಂದ್ ಪೀರ್ ಮತ್ತು ರೋಷನ್ ಎಂದು ಪೊಲೀಸರಿಂದ ತಿಳಿದುಬಂದಿರುತ್ತದೆ. ನಗದು ಹಣ 15 ಸಾವಿರಗಳನ್ನು ಇತರೆ ಚಟಗಳಿಗೆ ಖರ್ಚು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ಎಸ್ ವಿ ಎನ್ ವಕೀಲರಿಂದ –**

ನಮ್ಮ ಮನೆಯಲ್ಲಿ ಕಳುವಾದ ನಿರ್ದಿಷ್ಟ ದಿನಾಂಕ ಮತ್ತು ವಾರ ನನಗೆ ಹೇಳಲಾಗುವುದಿಲ್ಲ. ಸದರಿ ದಿನ ನಮ್ಮ ಮನೆಯಲ್ಲಿ ಯಾವುದೇ ಕಳ್ಳತನವಾಗದೆ ಇದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 594/2021**

| | |
|---|---|
| ಹೆಸರುಃ ನಾಗಮ್ಮ | ಚಾಸಾಃ 3 |
| ಗಂಡನ ಹೆಸರುಃ ಮಲ್ಲೇಶಪ್ಪ | ಪ್ರಾಸಾ: 1 |
| ವಯಸ್ಸುಃ 55 ವರ್ಷ | |
| ಉದ್ಯೋಗಃ ವ್ಯವಸಾಯ | |
| ವಾಸ ಸ್ಥಳಃ ಸಂತೆಬೆನ್ನೂರು, ಚನ್ನಗಿರಿ ತಾಃ | |
| ಸಾಕ್ಷಿಗೆ ದಿನಾಂಕಃ 21-10-2023 ರಂದು ಪ್ರಮಾಣ ವಚನ ಬೋಧಿಸಲಾಯಿತು. | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಮಗ ಚಾಸಾ-2 ನನ್ನ ಗಂಡ,

ಕಳೆದ ಸುಮಾರು ಎರಡೂವರೆ ವರ್ಷದ ಹಿಂದೆ ಅಕ್ಟೋಬರ್ ತಿಂಗಳಿನಲ್ಲಿ ನಮ್ಮ ಮನೆಯಲ್ಲಿ ಬೆಳಗಿನ ಜಾವ ನಾವು ಮನೆಯಲ್ಲಿ ಮಲಗಿರುವಾಗ ಬೀರುವಿನಲ್ಲಿಟ್ಟಿದ್ದ ಒಂದು ಜೊತೆ ಬೆಂಡೋಲೆ, ಒಂದು ಜೊತೆ ಸಣ್ಣ ಕಿವಿಯೋಲೆ, (ಒಟ್ಟು 2 ವರೆ ತೊಲ ಬಂಗಾರ), 15 ಸಾವಿರ ನಗದು ಹಣ ಕಳುವಾಗಿರುತ್ತದೆ. ಸದರಿ ಒಡವೆಗಳು ಎಷ್ಟು ಬೆಲೆ ಬಾಳುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ.

ಸದರಿ ವಿಚಾರವಾಗಿ ಚಾಸಾ-1 ರವರು ದೂರನ್ನು ದಾಖಲಿಸಿದ ಒಂದು ವಾರದ ನಂತರ ಪೊಲೀಸರು ಒಬ್ಬ ವ್ಯಕ್ತಿಯನ್ನು ನಮ್ಮ ಮನೆ ಬಳಿ ಕರೆತಂದು ಸದರಿ ವ್ಯಕ್ತಿ ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ತೋರಿಸಿರುತ್ತಾರೆ. ನಾನು ಪೊಲೀಸರು ಸದರಿ ದಿನ ಕರೆತಂದ ಆರೋಪಿಯನ್ನು ನೋಡಿದರೇ ಗುರುತಿಸುತ್ತೇನೆ. ಸಾಕ್ಷಿ ಈ ದಿನ ನ್ಯಾಯಾಲಯದ ಮುಂದೆ ಅಭಿರಕ್ಷೆಯಲ್ಲಿ ತರೆತಂದಿರುವ ಆರೋಪಿಯನ್ನು ನೋಡಿ ಆತನೇ ಇರಬಹುದು ಎಂದು ನುಡಿಯುತ್ತಾರೆ. ನಮ್ಮ ಮನೆಯಲ್ಲಿ ಕಳುವಾದ ಆಭರಣಗಳನ್ನು ಚಾಸಾ-1 ರವರು ಪಡೆದಿರುತ್ತಾರೆ. ನಗದು ಹಣವನ್ನು ಕೊಟ್ಟಿರುವುದಿಲ್ಲ.

ಸದರಿ ವಿಚಾರವನ್ನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗೆ ಮತ್ತು ಮರು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ಹೇಳಿಕೆಯನ್ನು ಮತ್ತು ಮರು ಹೇಳಿಕೆಯನ್ನು ಭಾಗಶಃ ನೋಡಲಾಗಿ ಸಾಕ್ಷಿಯು ಹೇಳಿಕೆಗೆ ಮತ್ತು ಮರು ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ದಿಃ 15-11-2020 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಕಳ್ಳತನವಾಗಿದೆ ಎಂದರೆ ಸರಿ. ನನಗೆ ನಮ್ಮ ಮನೆಯಲ್ಲಿ ಕಳುವಾದ ಸಂಗತಿ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದು ಕಂಡುಬಂದಿದ್ದನ್ನು ಪರಿಶೀಲಿಸಿ ನೋಡಿದಾಗ ಅದೇ ದಿನ ಬೆಳಗಿನ ಜಾವ 5.00 ಗಂಟೆಗೆ ತಿಳಿದುಬಂದಿರುತ್ತದೆ. ಕಳ್ಳತನವಾದ ಆಭರಣಗಳು ಒಂದು ಜೊತೆ ಬೆಂಡೋಲೆ ಎರಡುಮುಕ್ಕಾಲು ಗ್ರಾಂ, ಕಿವಿಯೋಲೆ ಎರಡೂಮುಕ್ಕಾಲು ಗ್ರಾಂ ಇತ್ತು ಎಂದರೆ ಸರಿ. ಸದರಿ ದಿನ ಚಾಸಾ-1 ರವರ ಮೊಬೈಲ್ ಸಹ ಕಳುವಾಗಿರುತ್ತದೆ. ಸದರಿ ಮೊಬೈಲ್ ಬೆಲೆ ಸುಮಾರು 5,000/- ರೂಾ. ಗಳು ಎಂದರೆ ಸರಿ. ಸರಿದ ಕಳುವಾದ ಆಭರಣಗಳ ಮೌಲ್ಯ 22 ಸಾವಿರ ರೂ ಆಗಿತ್ತು ಎಂದರೆ ಸರಿ.

ಸದರಿ ದಿನ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ ವ್ಯಕ್ತಿಗಳ ಹೆಸರು ಚಾಂದ್ ಪೀರ್ ಮತ್ತು ರೋಷನ್ ಎಂದು ಪೊಲೀಸರಿಂದ ತಿಳಿದುಬಂದಿರುತ್ತದೆ. ನಗದು ಹಣ 15 ಸಾವಿರಗಳನ್ನು ಇತರೆ ಚಟಗಳಿಗೆ ಖರ್ಚು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ಎಸ್ ವಿ ಎನ್ ವಕೀಲರಿಂದ –**

ನಮ್ಮ ಮನೆಯಲ್ಲಿ ಯಾರು ಕಳ್ಳತನ ಮಾಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನಾನು ಇವತ್ತೇ ನೋಡುತ್ತಿದ್ದೇನೆ ಎಂದರೆ ಸರಿ. ನಮ್ಮ ಮನೆಯಲ್ಲಿ ಕಳುವಾಗದ 15 ಸಾವಿರ ರೂ.ಗಳ ಮುಖಬೆಲೆ ನನಗೆ ಗೊತ್ತಿಲ್ಲ. ಸದರಿ ದಿನ ನಮ್ಮ ಮನೆಯಲ್ಲಿ ಯಾವುದೇ ಕಳ್ಳತನವಾಗದೆ ಇದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**